ಶಿಕ್ಷಣ ಸಂಘಟನೆ ಹೋರಾಟ



# ಸಫಾಯಿಕರ್ಮಚಾರಿ ಕಾವಲು ಸಮಿತಿ-ಕರ್ನಾಟಕ

# SAFAIKARMACHARI KAVALU SAMITI-KARNATAKA

K.B. Obalesha, Thamate (R) C/o, 1st Block, 2nd Main, Kuvempunagara,
Tumkur - 572103, Karnataka
Mob : 9742586468, Email : obaleshkb@gmail.com




ದಿನಾಂಕ: 01/01/2020

ಇವರಿಗೆ
ಶ್ರೀ ಯಡಿಯೂರಪ್ಪನವರು
ಮಾನ್ಯ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ.

**ಮಾನ್ಯ ಜಿಲ್ಲಾದಿಕಾರಿಗಳು ಧಾರವಾಡ ಇವರ ಮೂಲಕ**

ಮಾನ್ಯರೇ,

**ವಿಷಯ:** ಕರ್ನಾಟಕ ರಾಜ್ಯದಲ್ಲಿ ಮ್ಯಾನುಯಲ್ ಸ್ಕ್ಯಾವೆಂಜರ್ಸ್‌ಗಳಾಗಿ ಮಲದ ಗುಂಡಿಗಳಲ್ಲಿ ಮಲಹೊರುವ ವೃತ್ತಿ ಮಾಡುತ್ತಿರುವ ಕುಟುಂಬಗಳಿಗೆ ಸೂಕ್ತ ಪುನರ್ವಸತಿ ನೀಡಬೇಕು ಹಾಗೂ ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ಖಾಯಂ ನೌಕರರಾಗಿ ನೇಮಿಸಬೇಕು.

* * *

ಈ ಮೂಲಕ ತಮ್ಮಲ್ಲಿ ತಿಳಿಯಪಡಿಸುವುದೇನೆಂದರೆ ಕರ್ನಾಟಕ ರಾಜ್ಯದಲ್ಲಿ ೨೦೧೩ ರಿಂದ ೨೦೧೮ರ ವರೆಗೂ ೩೯೯೫ ಮ್ಯಾನುಯಲ್ ಸ್ಕ್ಯಾವೆಂಜರ್ಸ್‌ಗಳನ್ನು ಸರ್ಕಾರದಿಂದ ಗುರುತಿಸಲಾಗಿದೆ. ಆದರೆ ರಾಜ್ಯ ಸರ್ಕಾರ ಕಳೆದ ೬ ವರ್ಷಗಳಿಂದ ಮ್ಯಾನುಯಲ್ ಸ್ಕ್ಯಾವೆಂಜರ್ಸ್ ನೇಮಕ ನಿಷೇಧ ಹಾಗೂ ಅವರ ಪುನರ್ವಸತಿ ಕಾಯ್ದೆ ೨೦೧೩ರ ಪ್ರಕಾರ ಎಲ್ಲಾ ೩೯೯೫ ಸ್ಕ್ಯಾವೆಂಜರ್ಸ್‌ಗಳಿಗೆ ಪರ್ಯಾಯ ಉದ್ಯೋಗ ಪ್ರಾರಂಭಿಸಲು ಅಗತ್ಯವಿರುವ ಹಣಕಾಸಿನ ನೆರವು ನೀಡಬೇಕಾಗಿದೆ.

೧. ರಾಜ್ಯದಲ್ಲಿ ಈಗಾಗಲೇ ಅಧಿಕೃತವಾಗಿ ಗುರುತಿಸಿರುವ ಎಲ್ಲಾ ಸ್ಕ್ಯಾವೆಂಜರ್ಸ್‌ಗಳಿಗೆ ಪುನರ್ವಸತಿ ನಿಯಮಾನುಸಾರ ವಸತಿ ಮತ್ತು ಸ್ಕ್ಯಾವೆಂಜರ್ಸ್ ಮಕ್ಕಳ ವಿದ್ಯಾಭ್ಯಾಸ ಮುಂದುವರೆಸಲು ವಿದ್ಯಾರ್ಥಿವೇತನ ನೀಡಬೇಕು. ಹಾಗೂ ಎಲ್ಲಾ ಸ್ಕ್ಯಾವೆಂಜರ್ಸ್‌ಗಳಿಗೆ ಮೂಲಭೂತ ಸೌಲಭ್ಯಗಳಾದ ಶೌಚಾಲಯ, ಆರೋಗ್ಯ ಸೇವೆ, ಕುಡಿಯುವ ನೀರು, ಚರಂಡಿ ವ್ಯವಸ್ಥೆ ಒದಗಿಸಬೇಕಾಗಿದೆ. ಆದರೆ ಸ್ಕ್ಯಾವೆಂಜರ್ಸ್‌ಗಳಿಗೆ ಪುನರ್ವಸತಿ ನೀಡಬೇಕಾಗಿರುವ ಇಲಾಖೆಗಳಾದ ಸಮಾಜ ಕಲ್ಯಾಣ ಇಲಾಖೆ, ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ, ನಗರಾಭಿವೃದ್ದಿ ಇಲಾಖೆ ಹಾಗೂ ಇತರೇ ಇಲಾಖೆಗಳು ಯಾವುದೇ ರೀತಿಯ ಕನಿಷ್ಠ ಕ್ರಿಯಾಯೋಜನೆ ರೂಪಿಸದೇ ಕಾಲ ಹರಣ ಮಾಡುತ್ತಿವೆ. ಆದ್ದರಿಂದ ಈ ತಕ್ಷಣ ಗುರುತಿಸಿರುವ ಎಲ್ಲಾ ಸ್ಕ್ಯಾವೆಂಜರ್ಸ್‌ಗಳಿಗೆ ಪುನರ್ವಸತಿ ನೀಡಬೇಕು.

೨. ರಾಜ್ಯದಾದ್ಯಂತ ಜೀವಂತವಾಗಿರುವ ಮ್ಯಾನುಯಲ್ ಸ್ಕ್ಯಾವೆಂಜಿಂಗ್(ಮಲಹೊರುವ ಪದ್ಧತಿ)ಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ತಕ್ಷಣ ಸಮೀಕ್ಷೆ/ಸ್ವಘೋಷಣಾ ಕಾರ್ಯಕ್ರಮವನ್ನು ಕಾಲಮಿತಿಯೊಳಗೆ ರೂಪಿಸಿ, ಒಂದೇ ಬಾರಿಗೆ ಎಲ್ಲಾ ಸ್ಕ್ಯಾವೆಂಜರ್ಸ್‌ಗಳನ್ನು ಗುರುತಿಸಿ, ನೊಂದಾಯಿಸಿಕೊಂಡು, ಗುರುತಿನ ಪತ್ರ ನೀಡಬೇಕು.

1-1-2020

**ಆವಕ ಗುಮಾಸ್ತ**
**ಜಿಲ್ಲಾಧಿಕಾರಿಗಳ ಕಚೇರಿ**
**ಧಾರವಾಡ**

ಶಿಕ್ಷಣ ಸಂಘಟನೆ ಹೋರಾಟ





# ಸಫಾಯಿಕರ್ಮಚಾರಿ ಕಾವಲು ಸಮಿತಿ-ಕರ್ನಾಟಕ

## SAFAIKARMACHARI KAVALU SAMITI-KARNATAKA

K.B. Obalesha, Thamate (R) C/o, 1st Block, 2nd Main, Kuvempunagara,
Tumkur - 572103, Karnataka
Mob : 9742586468, Email : obaleshkb@gmail.com

೩. ರಾಜ್ಯದಲ್ಲಿ ಈಗಾಗಲೇ ೭೮ಜನ ಬಡ-ದಲಿತ ಕೂಲಿ ಕಾರ್ಮಿಕರು ಮಲದ ಗುಂಡಿಗಳಲ್ಲಿ ಉಸಿರುಗಟ್ಟಿ ಸತ್ತಿದ್ದಾರೆ, ಮುಂದಿನ ದಿನಗಳಲ್ಲಿ ಈ ಅನ್ಯಾಯದ ಸಾವುಗಳನ್ನು ತಡೆಗಟ್ಟಲು ಒಳಚರಂಡಿ, ಸೆಪ್ಟಿಕ್ ಟ್ಯಾಂಕ್ ಕ್ಲೀನ್ ಮಾಡಿಸಲು ಅಗತ್ಯ ವೈಜ್ಞಾನಿಕ ಯಂತ್ರಗಳನ್ನು ಅಳವಡಿಸಬೇಕು. ಹಾಗೂ ಅಪಾಯಕಾರಿ ಕೆಲಸಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ರಾಜ್ಯಮಟ್ಟದ ಸಹಾಯವಾಣಿ ಪ್ರಾರಂಭಿಸಬೇಕು.

೪. ಮಲದ ಗುಂಡಿಗಳಲ್ಲಿ ಉಸಿರುಗಟ್ಟಿ ಸಾಯುವಂತಹ ಘಟನೆಗಳು ನಡೆದರೆ ಅಂತಹವುಗಳನ್ನು ಐ.ಪಿ.ಸಿ. ಸೆಕ್ಷನ್ ೩೦೪ ಪಾರ್ಟ್-೨ ಅಡಿಯಲ್ಲಿ ನೊಂದಾಯಿಸುವಂತೆ ಸರ್ಕಾರಿ ಆದೇಶ ಹೊರಡಿಸಬೇಕು ಮತ್ತು ಈಗಾಗಲೇ ಸತ್ತಿರುವ ೭೮ಕೇಸುಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಿ ನ್ಯಾಯ ನೀಡಲು ತ್ವರಿತ ನ್ಯಾಯಪೀಠ ಸ್ಥಾಪಿಸಬೇಕು.

೫. ೨೦೧೭ರಲ್ಲಿ ರಾಜ್ಯ ಸರ್ಕಾರ ೫೦ ಎಫ್.ಎಸ್.ಟಿ.ಸಿ.ಗಳನ್ನು ಸಣ್ಣ ಪಟ್ಟಣಗಳಲ್ಲಿ ಪ್ರಾರಂಭಿಸಲು ಬಜೆಟ್‌ನಲ್ಲಿ ಅನುಮೋದಿಸಿದೆ. ಆದರೆ ಇದುವರೆಗೆವಿಗೂ ಈ ಎಫ್.ಎಸ್.ಟಿ.ಸಿ.ಗಳನ್ನು ಪ್ರಾರಂಭಿಸಿಲ್ಲ. ಈ ತಕ್ಷಣ ರಾಜ್ಯದಾದ್ಯಂತ ಎಫ್.ಎಸ್.ಟಿ.ಸಿ.ಗಳನ್ನು ಅಳವಡಿಸಬೇಕು, ಮನುಷ್ಯರಿಂದ ಮಲ-ಮೂತ್ರ ಸ್ವಚ್ಛ ಮಾಡಿಸುವ ಪದ್ಧತಿ ನಿರ್ಮೂಲನೆ ಮಾಡಬೇಕು.

೬. ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಯೋಗ ಹಾಗೂ ಸಫಾಯಿ ಕರ್ಮಚಾರಿಗಳ ಅಭಿವೃದ್ಧಿ ನಿಗಮ ಕಳೆದ ಎರಡು ವರ್ಷಗಳಿಂದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಇಲ್ಲದೇ ನಿಷ್ಕ್ರೀಯಗೊಂಡಿದೆ. ಅದ್ದರಿಂದ ಈ ತಕ್ಷಣ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ಹುದ್ದೆಗೆ ಅನುಭವಿ ಸಫಾಯಿ ಕರ್ಮಚಾರಿ ಸಂಘಟನೆಗಳ ಮುಖಂಡರನ್ನೇ ನೇಮಿಸಿ, ಸಕ್ರಿಯಗೊಳಿಸಲು ಅದೇಶಿಸಬೇಕು. ಹಾಗೂ ಎಲ್ಲಾ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಸುಭದ್ರವಾದ ಪುನರ್ವಸತಿ ಒದಗಿಸಲು ಅಗತ್ಯ ಅನುದಾನ ನಿಗದಿಗೊಳಿಸಬೇಕು.

೭. ರಾಜ್ಯದಾದ್ಯಂತ ಈಗಾಗಲೇ ಗುರುತಿಸಿ ನೊಂದಾಯಿಸಿರುವಂತಹ ಎಲ್ಲಾ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಸಮಗ್ರ ಮಾಹಿತಿಯನ್ನು ಸಂಗ್ರಹಿಸಿ ಕಂಪ್ಯೂಟರಿಕರಣಗೊಳಿಸಬೇಕು.

೮. ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಪುನರ್ವಸತಿಗೆ ಪ್ರತ್ಯೇಕವಾದ ಅನುದಾನವನ್ನು ಮೀಸಲಿಡಬೇಕು.

೯. ಕರ್ನಾಟಕ ರಾಜ್ಯದಲ್ಲಿ ಸಫಾಯಿ ಕರ್ಮಚಾರಿ ಮತ್ತು ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಸಮಗ್ರ ಅಭಿವೃದ್ಧಿ ಹಾಗೂ ವಿಮೋಚನೆಗಾಗಿ ದಿನನಿತ್ಯ ಶ್ರಮಿಸಲು ಪ್ರತ್ಯೇಕವಾಗಿ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಬೇಕು.

೧೦. ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಮತ್ತು ಸಫಾಯಿ ಕರ್ಮಚಾರಿ ಮಕ್ಕಳಿಗೆ ಪ್ರಿ-ಮೆಟ್ರಿಕ್ ವಿದ್ಯಾರ್ಥಿವೇತನವನ್ನು ನೀಡದೆ ನಿರ್ಲಕ್ಷ್ಯವಹಿಸಲಾಗಿದೆ. ಈ ಕೂಡಲೇ ರಾಜ್ಯದ ನಗರ ಮತ್ತು ಗ್ರಾಮೀಣ ಭಾಗದಲ್ಲಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಮತ್ತು ಸಫಾಯಿ ಕರ್ಮಚಾರಿ ಮಕ್ಕಳಿಗೆ ಈ ತಕ್ಷಣವೇ ವಿದ್ಯಾರ್ಥಿವೇತನ ಜಾರಿಗೊಳಿಸಬೇಕು.

**ನಗರ ಸ್ಥಳಿಯ ಸಂಸ್ಥೆಗಳು ಮತ್ತು ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರ ಕುರಿತು**

೧. ರಾಜ್ಯದ ವಿವಿಧ ನಗರ ಸ್ಥಳಿಯ ಸಂಸ್ಥೆಗಳಲ್ಲಿ ಸ್ವಚ್ಛತಾ ಕಾರ್ಯ ಮಾಡುತ್ತಿರುವ ನೇರಪಾವತಿ ಹಾಗೂ ಇತರೆ ಎಲ್ಲಾ ಮಾದರಿಗಳಲ್ಲಿ ನೇಮಕಗೊಂಡಿರುವ ಪೌರಕಾರ್ಮಿಕರನ್ನು ಒಂದೇ ಬಾರಿಗೆ ನೇರನೇಮಕ ಮಾಡಿಕೊಂಡು ಖಾಯಂಗೊಳಿಸಬೇಕು.

ಶಿಕ್ಷಣ ಸಂಘಟನೆ ಹೋರಾಟ

# ಸಫಾಯಿಕರ್ಮಚಾರಿ ಕಾವಲು ಸಮಿತಿ-ಕರ್ನಾಟಕ

# SAFAIKARMACHARI KAVALU SAMITI-KARNATAKA

K.B. Obalesha, Thamate (R) C/o, 1st Block, 2nd Main, Kuvempunagara,
Tumkur - 572103, Karnataka
Mob : 9742586468, Email : obaleshkb@gmail.com

೨. ನೇರನೇಮಕಾತಿಗೆ ರೂಪಿಸಿರುವ ವಿಶೇಷ ನಿಯಮಾವಳಿಗಳಲ್ಲಿ ನಿಗಧಿಗೊಳಿಸಿರುವ ೪೫ವರ್ಷಗಳ ವಯೋಮಿತಿಯನ್ನು ರದ್ದುಗೊಳಿಸಿ ಕೆಲಸಮಾಡುತ್ತಿರುವ ಎಲ್ಲರನ್ನು ಖಾಯಂಗೊಳಿಸಬೇಕು. ೫೦೦ಜನರಿಗೆ ಒಬ್ಬ ಸಫಾಯಿ ಕರ್ಮಚಾರಿಯನ್ನು ನೇಮಕ ಮಾಡಿಕೊಳ್ಳಬೇಕು.

೩. ಕರ್ನಾಟಕದಲ್ಲಿ ಎಲ್ಲಾ ಸಫಾಯಿ ಕರ್ಮಚಾರಿಗಳ ಭವಿಷ್ಯ ನಿಧಿ ಮತ್ತು ಇಎಸ್ಐ ಸೌಲಭ್ಯಗಳನ್ನು ನೀಡದೆ ಕಾರ್ಮಿಕರಿಗೆ ವಂಚಿಸಿರುವ ಪ್ರಕರಣಗಳನ್ನು ನ್ಯಾಯಂಗ ತನಿಖೆ ಕೈಗೊಂಡು ತಕ್ಷಣ ಕಾರ್ಮಿಕರಿಗೆ ನ್ಯಾಯ ಒದಗಿಸಬೇಕು.

೪. ಕಾರ್ಮಿಕರಿಗೆ ವಾರದ ರಜೆ ಮತ್ತು ಸಾಂದರ್ಭಿಕ ರಜೆಯನ್ನು ಮುಂಜೂರು ಮಾಡಬೇಕು ಹಾಗೂ ಪ್ರತಿತಿಂಗಳು ೫ನೇ ತಾರೀಖಿನೊಳಗೆ ಅವರ ವೇತನವನ್ನು ಖಾತೆಗಳಿಗೆ ವರ್ಗಾಯಿಸಬೇಕು.

೫. ಕಾರ್ಮಿಕ ಕಾಯಿದೆ ಅನ್ವಯ ಅವರಿಗೆ ಸುರಕ್ಷಿತ ಪರಿಕರಗಳು, ಸ್ವಚ್ಚತಾಗಾರ, ಶೌಚಾಲಯ ಹಾಗೂ ಇನ್ನುಳಿದ ಸೌಲಭ್ಯಗಳನ್ನು ನೀಡಬೇಕು.

೬. ಅನೇಕ ವರ್ಷಗಳಿಂದ ರಾಜ್ಯದ ಆರು ಸಾವಿರಕ್ಕೂ ಹೆಚ್ಚು ಗ್ರಾಮ ಪಂಚಾಯಿತಿಗಳಲ್ಲಿ ಕನಿಷ್ಟ ವೇತನ ಸೇರಿದಂತೆ ಯಾವುದೇ ಕಾರ್ಮಿಕ ಸೌಲಭ್ಯಗಳು ಇಲ್ಲದೆ ಗುಲಾಮರಂತೆ ಸ್ವಚ್ಚತೆ ಕಾರ್ಯನಿರ್ವಹಿಸುತ್ತಿರುವ ಸ್ವಚ್ಚತಾ ಕಾರ್ಮಿಕರು(ಜಾಡಮಾಲಿಗಳು) ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯಿತಿ ರಾಜ್ಇಲಾಖೆಯ ಅದೇಶದಂತೆ ಎಲ್ಲರನ್ನೂ ಅನುಮೋದಿಸಿ ಖಾಯಂಗೊಳಿಸಬೇಕು.

೭. ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಚತಗಾರರಿಗೆ ಭವಿಷ್ಯ ನಿಧಿ, ಅರೋಗ್ಯ ವಿಮೆ ಹಾಗೂ ಸುರಕ್ಷತಾ ಸಲಕರಣೆಗಳನ್ನು ಈ ತಕ್ಷಣ ಮುಂಜೂರು ಮಾಡಬೇಕು ಹಾಗೂ ಅನುಷ್ಠಾನಗೊಳಿಸಬೇಕು.

01/01/2020

ಡಾ. ಕೆ. ಬಿ. ಓಬಳೇಶ
ರಾಜ್ಯ ಸಂಚಾಲಕರು ಹಾಗು ಸದಸ್ಯರು
ರಾಜ್ಯ ಮೇಲ್ವಿಚಾರಣ ಸಮಿತಿ, ಪಿ.ಇ.ಎಂ.ಎಸ್.ಅರ್.ಕಾಯಿದೆ-೨೦೧೩

ಡಾ. ವಿಜಯ ಗೂಂಟ್ರಳ್ಳ
ಅದ್ಯಕ್ಷರು, ಎಸ್.ಕೆ.ಕೆ.ಎಸ್,.

ಡಾ. ಅರ್. ವಿ. ಚಂದ್ರಶೇಖರ್
ಪ್ರಾಧ್ಯಾಪಕರು, ಎನ್ಎಲ್ಎಸ್ವಿ,

ಬೆಂಗಳೂರು

ದಾ. ಎಸ್ ಎಟಿ, ಪೌ. ಮತ್ತು ನೌಕರಾರ ಸಂಘ

ಶಿಕ್ಷಣ ಸಂಘಟನೆ ಹೋರಾಟ



# ಸಫಾಯಿಕರ್ಮಚಾರಿ ಕಾವಲು ಸಮಿತಿ-ಕರ್ನಾಟಕ

## SAFAIKARMACHARI KAVALU SAMITI-KARNATAKA



K.B. Obalesha, Thamate (R) C/o, 1st Block, 2nd Main, Kuvempunagara,
Tumkur - 572103, Karnataka
Mob : 9742586468, Email : obaleshkb@gmail.com

ದಿನಾಂಕ: 01/01/2020

ಇವರಿಗೆ
ಮಾನ್ಯ ಜಿಲ್ಲಾದಿಕಾರಿಗಳು
ಧಾರವಾಡ

ಮಾನ್ಯರೇ,

**ವಿಷಯ: ಹುಬ್ಬಳ್ಳಿ-ದಾರವಾಡ ಮಹಾನಗರ ಪಾಲಿಕೆಯ ಪೌರಕಾರ್ಮಿಕರು ಹಾಗೂ ಜಿಲ್ಲೆಯ ಮ್ಯಾನುಯಲ್ ಸ್ಕ್ಯಾವೆಂಜರ್ಸ್‌ಗಳ ಕುರಿತ ಮುಖ್ಯವಾದ ಈ ಕೆಳಗಿನ ಬೇಡಿಕೆಗಳನ್ನು ಕೂಡಲೇ ಈಡೇರಿಸಬೇಕೆಂದು ಕೋರುತ್ತೇವೆ.**

೧. ರಾಜ್ಯ ಸರ್ಕಾರ ಪೌರಕಾರ್ಮಿಕರ ಗುತ್ತಿಗೆ ಪದ್ದತಿ ರದ್ದು ಪಡಿಸಿ ೩ ವರ್ಷ ಕಳೆದರು ಇಲ್ಲಿವರೆವಿಗೂ ಮಹಾನಗರ ಪಾಲಿಕೆಯವರು ಸೂಕ್ತ ಕ್ರಮ ಕೈಗೊಳ್ಳುವಲ್ಲಿ ವಿಫಲರಾಗಿದ್ದಾರೆ, ಈ ಬಗ್ಗೆ ತಕ್ಷಣ ಕ್ರಮವಹಿಸಬೇಕು

೨. ಕನಿಷ್ಠವೇತನ ವ್ಯತ್ಯಾಸ ಬಾಕಿ ಇರುವ ರೂ.೯.೦೦ಕೋಟಿ ಕಾರ್ಮಿಕರ ಖಾತೆಗಳಿಗೆ ತಕ್ಷಣ ಜಮೆ ಮಾಡಬೇಕು

೩. ಜಿಲ್ಲಾಧಿಕಾರಿಗಳ ಅಧೇಶಿತ ಪೌರಕಾರ್ಮಿಕರ ಭವಿಶ್ಯ ನಿಧಿ ಹಣ ರೂ.೩.೦೦ ಕೋಟಿ ಮಹಾನಗರ ಪಾಲಿಕೆಯಿಂದ ಬಾಕಿ ಉಳಿದಿದ್ದು, ತಕ್ಷಣ ಪಾವತಿಸಬೇಕು,

೪. ಹೇರಿಗೆ ಸೌಲಬ್ಯ ಕಾಯ್ದೆ ಭತ್ಯೆ ಆದೇಶಿತ ಮೊತ್ತ ರೂ.೨೧.೭೦ ಲಕ್ಷ ಈ ಕೂಡಲೇ ೮೬೮ ಮಹಿಳಾ ಪೌರಕಾರ್ಮಿಕರಿಗೆ ತಕ್ಷಣ ಪಾವತಿಸಬೇಕು.

೫. ರಾಜ್ಯ ಸರಕಾರ ಪೌರಕಾರ್ಮಿಕರಿಗೆ ಬೆಳಗಿನ ಉಪಹಾರ ನೀಡಲು ಅಧೇಶಿಸಿದೆ, ಆದರೆ ಮಹಾನಗರ ಪಾಲಿಕೆ ಉಪಹಾರ ನೀಡುತ್ತಿಲ್ಲ, ಜೊತೆಗೆ ಈ ತಕ್ಷಣದಿಂದ ಬೆಳಗಿನ ಉಪಹಾರ ನೀಡಬೇಕು,

೬. ಕಳೆದ ೩ ವರ್ಷಗಳಿಂದ ತುಟಿ ಭತ್ಯೆ ಪಾವತಿಸಿಲ್ಲ, ಈ ತಕ್ಷಣ ಪ್ರತಿ ಪೌರಕಾರ್ಮಿಕರಿಗೆ ನಿಯಮಾನುಸಾರ ಪಾವತಿಸಬೇಕು

೭. ದಾರವಾಡ ಜಿಲ್ಲೆಯ ನಗರ ಮತ್ತು ಗ್ರಾಮೀಣ ಭಾಗದಲ್ಲಿ ಮಲಹೊರುವ ಕಾರ್ಮಿಕರ ಸಮೀಕ್ಷೆ ನಡೆಯುತ್ತಿದ್ದು, ಜಿಲ್ಲಾಡಳಿತ ಸೂಕ್ತವಾಗಿ ಸಕಾಲದಲ್ಲಿ ಸ್ಪಂದಿಸುತ್ತೀಲ್ಲ, ಅದ್ದರಿಂದ ಸರ್ಕಾರ ನಡೆಸುತ್ತಿರುವ ಅಧಿಕೃತ ಸಮೀಕ್ಷೆ ಉದ್ದೇಶಪೂರ್ವಕವಾಗಿ ವಿಳಾಂಬವಾಗಿದೆ, ಇದರಿಂದ ಸಮಾಜದ ಕಟ್ಟ ಕಡೆಯ ವ್ಯಕ್ತಿಗೆ ಸಮಾಜೀಕ ನ್ಯಾಯ ವಿಳಾಂಬವಾಗಿದೆ, ಅದ್ದರಿಂದ ಜಿಲ್ಲಾಡಳಿತ ಕೂಡಲೇ ಸಮೀಕ್ಷೆಯನ್ನು ಮುಗಿಸಬೇಕು ಹಾಗೂ ಎಲ್ಲಾ ಸ್ಕ್ಯಾವೆಂಜರ್ಸ್ ಗಳನ್ನು ನೊಂದಾಯಿಸಬೇಕು,

1-1-2020

ಆವಕ ಗುಮಾಸ್ತ
ಜಿಲ್ಲಾಧಿಕಾರಿಗಳ ಕಚೇರಿ
ಧಾರವಾಡ

ಶಿಕ್ಷಣ ಸಂಘಟನೆ ಹೋರಾಟ



# ಸಫಾಯಿಕರ್ಮಚಾರಿ ಕಾವಲು ಸಮಿತಿ-ಕರ್ನಾಟಕ

# SAFAIKARMACHARI KAVALU SAMITI-KARNATAKA



K.B. Obalesha, Thamate (R) C/o, 1st Block, 2nd Main, Kuvempunagara,
Tumkur - 572103, Karnataka
Mob : 9742586468, Email : obaleshkb@gmail.com

ಈ ಎಲ್ಲಾ ಬೇಡಿಕೆಗಳನ್ನು ೧೫ ದಿನಗಳಲ್ಲಿ ಈಡೇರಿಸದಿದ್ದಲ್ಲಿ ಹುಬ್ಬಳ್ಳಿ-ದಾರವಾಡ ಅವಳಿ ನಗರದಲ್ಲಿ ಸ್ವಚತಾ ಕೆಲಸ ಸ್ಥಗಿತಗೊಳಿಸಿ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ರಾಜ್ಯ ಪೌರಕಾರ್ಮಿಕರ ಸಂಘಟನೆಗಳ ಮುಂಖಡರ ಸಂಯುಕ್ತ ಅಶ್ರಯದಲ್ಲಿ ಅನಿರ್ಧಿಷ್ಟ ಪ್ರತಿಭನೆ ರೂಪಿಸಲಾಗುವುದು. ಎಂದು ಈ ಮೂಲಕ ಎಚ್ಚರಿಕೆ ನೀಡಲಾಗಿತ್ತಿದೆ,

ಧನ್ಯವಾದಗಳೊಂದಿಗೆ

01/10/2020

ಡಾ.ಕೆ.ಬಿ.ಓಬಳೇಶ

ರಾಜ್ಯ ಸಂಚಾಲಕರು

ಎಸ್.ಕೆ.ಕೆ.ಎಸ್, ಸದಸ್ಯರು, ರಾಜ್ಯ ಮೇಲ್ವಿಚಾರಣಾ ಸಮಿತಿ.

ಡಾ.ವಿಜಯ ಗುಂಟ್ರಾಳ

ಅದ್ಯಕ್ಷರು,

ದಾ. ಎಸ್ ಎಟಿ, ಪೌ. ಮತ್ತು ನೌಕರಾರ ಸಂಘ

ಕಾಸ್ತೂರೆವ್ವ ಬೆಳಗುಂದಿ,

ನಾಗಮ್ಮ ಗೊಲ್ಲರ್,

ಗಂಗಮ್ಮಸಿದ್ದರಾಮಪುರ್

ಕನಕಪ್ಪಕೊಟಬಾಗ

ಪುಲ್ಲಯ್ಯ ಚಿಂಚಗೋಳ

ಚೆನ್ನವ್ವ ಬೆಳದಡಿ

ಯಲ್ಲವ್ವ ದೇವರಗುಡಿಹಾಳ್

ಅನಿತಾ ಈನಗೊಂಡ ಹಾಗೂ ನೂರಾರು ಪೌರಕಾರ್ಮಿಕರು